# ಪರಿಸರ ಪ್ರೇಮಿ, ಸಾಲುಮರದ ಆಶೋಕ್ ಅವರ ಸಾಧನೆ ಅನನ್ಯ.

ಚನ್ನರಾಯಪಟ್ಟಣಕ್ಕೆ ಹೆಸರೂ ಆಯಿತು, ಹಸಿರು ಆಯಿತು ಎಂದರೆ ಅತಿಶಯವಾಗದು. ಪಟ್ಟಣದ ಎಲ್ಲಾ ಕಛೇರಿಗಳ ಮುಂದೆ, ರಸ್ತೆಯ ಇಕ್ಕೆಲೆ ಗಳಲ್ಲಿ, ವೃತ್ತಗಳಲ್ಲಿ, ಶಾಲಾ ಕಾಲೇಜಿನ ಆವರಣದಲ್ಲಿ, ಹಲವಾರು ಬಗ್ಗೆ ಔಷಧಿ ಗಿಡಗಳು, ಶ್ರೀವನದ ನಕ್ಷತ್ರ ರಾಶಿ ವನ ನವಗ್ರಹ, ಅಷ್ಟದಿಕ್ ಪಾಲಕ ವನ, ಹಾಗು ಹೀಗೆ ವಿವಿಧ ನಮೂನೆಯ ಸುಮಾರು 40 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಅದನ್ನು ಪೋಷಿಸಿ ಇಡೀ ತಾಲ್ಲೂಕು ಹಸಿರಾಗಿ ಕಂಗೊಸಳಿಸಲು ಕಾರಣೀಭೂತರಾಗಿರುವ ಇವರ ಸಾಧನೆ ಬಹುವರ್ಣದ್ದು, ವರ್ಣಿಸಲು ಅಸಾಧ್ಯವೂ ಕೂಡ.

ಪಟ್ಟಣದಲ್ಲಿ ನಗು ಮೊಗದ ತೆಳುಗಡ್ಡ, ಎತ್ತರದ ವ್ಯಕ್ತಿ ತನ್ನ ಕಾಯಕದಲ್ಲಿ ತೊಡಗಿ ಗಿಡಕ್ಕೆ ಪಾತಿ ಮಾಡಿ ನೀರು ಹಾಯಿಸುತ್ತಾ ಮುಂಜಾನೆ ಸರಸರನೆ ಓಡಾಡುವ ವ್ಯಕ್ತಿ ಆಶೋಕ್. ಇಲ್ಲಿನ ಪರಿಸರ ಪ್ರೇಮಿ ಪರಿಸರವಾದಿ ಎಂದು ಹೇಳಿದರೆ ಎಂಥಹ ಚಿಕ್ಕ ಮಗುವಿಗೂ ಥಟ್ಟನೇ ನೆನಪಾಗುವುದು.

ಆಶೋಕ್ ರವರು ನಿಗರ್ವಿ, ಸದಾ ಸಂತೃಪ್ತಿಯ ಸ್ನೇಹಮಯಿ, ಚನ್ನರಾಯಪಟ್ಟಣದಲ್ಲಿಯೇ ಹುಟ್ಟಿದ್ದು ಇವರು ತಮ್ಮ ಶಿಕ್ಷಣವನ್ನು ಇಲ್ಲಿನ ನವೋದಯ ಹಾಗೂಆದಿಚುಂಚನಗಿರಿ ಪದವಿ ಕಾಲೇಜಿನಲ್ಲಿ ಮುಗಿಸಿದ್ದು, ತಮ್ಮ ವಿದ್ಯಾರ್ಥಿದೆಸೆ ಯಲ್ಲಿಯೇ ಮುಖಂಡತ್ವ, ಪರೋಪಕಾರ ಮಾಡುವ ಇತ್ಯಾದಿ ಇವರದ್ದಾಗಿತ್ತು.

ಪದವಿ ಶಿಕ್ಷಣಾಭ್ಯಾಸದಲ್ಲಿ ಎನ್. ಎಸ್. ಎಸ್ ನಿಂದ ಪ್ರೇರಿತರಾದ ಆಶೋಕ್ ಮಹಾತ್ಮಾಗಾಂದೀಜಿಯವರು ಕಂಡ ರಾಮರಾಜ್ಯದ ಸಕಾರಕ್ಕೆ ಸಮಾಜಕ್ಕೆ ಬದುಕಿನ ಅವಧಿಯಲ್ಲಿ ಏನದರೂ ಕೊಡುಗೆಯನ್ನು ನೀಡುವ ಧ್ಯೇಯ ಇವರದಾಗಿದೆ.

ಪಟ್ಟಣದ ಶಾಲಿನಿ ವಿದ್ಯಾಶಾಲೆ ಸಂಸ್ಥಾಪಕ ನಂಜುಂಡೇಗೌಡ, ಜಯಮ್ಮ

ದಂಪತಿಗಳ ಸುಪುತ್ರ ಆಶೋಕ್ ರವರು ತಂದೆ ತಾಯಿಯವರ ಆಶೀರ್ವಾದ ಸಹಕಾರದಿಂದ ಪರಿಸರ, ಸಾಮಾಜಿಕ, ಶಿಕ್ಷಣ, ಯೋಗಾಸನ ಕ್ಷೇತ್ರಗಳಲ್ಲಿ ವಿಶಿಷ್ಠ ಸೇವೆಗೈದಿದ್ದಾರೆ.

ಪರೋಪಕಾರಂ ಇದಂ ಶರೀರಂ ಎಂಬಂತೆ ಪರೋಪಕಾರಿ ಅಶೋಕ್ ಇವರಿಗೆ ಮೂಲತಃ ರೈತ. ಹೊಲದ ಹಸಿರಿನಿಂದಲೇ ಸಸ್ಯ ಪ್ರೀತಿ ಹುಟ್ಟಿದ್ದು, ಪರಿಸರ ಸಂರಕ್ಷಣಾ ಕಾರ್ಯದಲ್ಲಿ ಅಶೋಕ್ ತಲ್ಲೀನರಾದರು, ಮನುಷ್ಯನಂತೆ ಗಿಡ-ಮರ ಪಶು-ಪಕ್ಷಿಗಳು ಪರಿಸರದಲ್ಲಿದ್ದು ಅವುಗಳಿಗೆ ಹಿಂಸೆ, ನೋವು ಬೇಡ ಎಂದು ಪ್ರತಿಪಾದಿಸುವ ಇವರು ಪಟ್ಟಣದ ಕೆ.ಆರ್. ವೃತ್ತ, ರಾಷ್ಟ್ರೀಯ ಹೆದ್ದಾರಿ-48ರಲ್ಲಿ ವಿಭಜಕಗಳಲ್ಲಿ ಗಿಡನೆಡುವ ಕಾರ್ಯ ನಿರಂತವಾಗಿಸಾಗಿದೆ. ರಸ್ತೆಯ ಎರಡು ಬದಿಯಲ್ಲೂ ಸಂಪಿಗೆ ಮರಗಳಸಾಲು, ಚೆರ್ರಿ, ಗಸಗಸೆ, ವಂಗೆ ಗಿಡಗಳ ಸಾಲು ಸಾಲು ಮರಗಳನ್ನು ನೇಡುವ ಮೂಲಕ ಜನರ ಮನಸ್ಸಿನಲ್ಲಿ ಸಾಲು ಮರದ ಅಶೋಕನೆಂದು ಪ್ರಸಿದ್ಧರಾಗಿದ್ದಾರೆ.

ಸುಮಾರು 100ಕ್ಕೂ  ಹೆಚ್ಚು ಆರೋಗ್ಯ ತಪಾಸಣಾ ಶಿಬಿರ, ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರ, ರಕ್ತದಾನ ಶಿಬಿರಗಳನ್ನು ಆಯೋಜಿಸಿದ್ದಾರೆ, ಮರಣಾನಂತರ ಕಣ್ಣುಗಳನ್ನು ದಾನ ಮಾಡಲು ಪ್ರೇರೆಪಣೆ ಮಾಡುತಿದ್ದಾರೆ. ಪಟ್ಟಣದ ಎಪಿಎಂಸಿ ಆವರಣದಲ್ಲಿ 700ಕ್ಕೂ ಹೆಚ್ಚು ಆಲದ ಕೊಂಬೆಗಳನ್ನು ನೆಟ್ಟು ಬೆಳೆಸಿದ್ದಾರೆ. 7 ವರ್ಷಗಳ ಹಿಂದೆ ಬೆಳೆಸಿದ ಈ ಮರಗಳು ಪಕ್ಷಿಗಳ ನೆಲೆ

ವೀಡಾಗಿದೆ. ಆ ಸಂದರ್ಭದಲ್ಲಿ ಬಂದ ತೊಡರುಗಳನ್ನು ಸ್ವೀಕರಿಸಿದರು.

ಅರಣ್ಯ ಇಲಾಖೆಯ ಬೆಲಸಿಂದ ಶ್ರೀವನ ರಾಜ್ಯದಲ್ಲಿ ವಿಶಿಷ್ಟವಾದದ್ದು. ಸುಮಾರು 300 ಎಕರೆ ಪ್ರದೇಶದ ಶ್ರೀವನದಲ್ಲಿ ವಿದ್ಯಾರ್ಥಿಗಳ, ನಾಗರೀಕರ, ಪರಿಸರ ಪ್ರೇಮಿಗಳ ವತಿಯಿಂದ ಬಿತ್ತನೆ ಕಾರ್ಯ ಮಾಡಿದ್ದಾರೆ.  ಶ್ರೀಗಂಧ, ತೇಗ, ಬೀಟೆ, ಹೊನ್ನೆ, ಹಲಸು, ಮಾವು ಇನ್ನೂ ಹಲವು ಜಾತಿಯ ಮರಗಳನ್ನು ಬೆಳೆಸಿದ್ದು ರಾಶಿ ವನ, ನಕ್ಷತ್ರವನ, ರುದ್ರಾಕ್ಷಿ ಹಾಗೂ 100ಕ್ಕೂ ಹೆಚ್ಚು ಜಾತಿಯ ಔಷಧೀಯ ಗಿಡಗಳನ್ನು ಮಕ್ಕಳಂತೆ ಸಾಕಿ ಸಲಹಿ ಪೋಷಣೆ ಮಾಡುತ್ತಿದ್ದಾರೆ.  ಸ್ವತಃ ನರ್ಸರಿ ಮಾಡಿರುವ ಅಶೋಕ್ ಪ್ರತಿ ವರ್ಷ 50ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸಿ ಪರಿಸರ ದಿನಾಚರಣೆಯ ದಿನದಂದು ಉಚಿತವಾಗಿ ವಿತರಿಸುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ.  ಇವರ ಸಾಧನೆಯನ್ನು ಪ್ರಶಂಶಿಸಿ ರಾಷ್ಟ್ರ ಹಾಗೂ ರಾಜ್ಯ ಅತ್ಯುನ್ನತ ಪರಿಸರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 2004ರಲ್ಲಿ ಕರ್ನಾಟಕದ ಸರ್ಕಾರದ ಅರಣ್ಯ ಜೀವಶಾಸ್ತ್ರ ಇಲಾಖೆಯಿಂದ ರಾಜೀವ್ ಗಾಂಧಿ ಪರಿಸರ ಪ್ರಶಸ್ತಿಯನ್ನು ಒಂದು ಲಕ್ಷ ನಗದು ಹಣವನ್ನು, 2005ರಲ್ಲಿ ಭಾರತ ಸರ್ಕಾರವು

ಅರಣ್ಯೀಕರಣಕ್ಕೆ ದೇಶದಲ್ಲಿ ನೀಡುವ ಅತ್ಯುನತ ಪ್ರಶಸ್ತಿಯಾದ ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪ್ರಶಸ್ತಿಯನ್ನು ಒಂದು ಲಕ್ಷ ನಗದು ಹಣವನ್ನು, 2005ರಲ್ಲಿ ತೋಟಗಾರಿಕಾ ಇಲಾಖೆಯು ಜಿಲ್ಲಾ ಉತ್ತಮ ತೋಟಗಾರಿಕ ಪ್ರಶಸ್ತಿ, 2009ರಲ್ಲಿ ಕರ್ನಾಟದ ಸರ್ಕಾರದ ಅರಣ್ಯ ಇಲಾಖೆಯು ವೃಕ್ಷ ಪ್ರೇಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಆಶೋಕ್ ರವರಿಗೆ ಈ ಭೂಮಿ ಉಳಿದರೇ ಇಲ್ಲಿಯ ಜೀವರಾಶಿ ಉಳಿಯಲು ಸಾಧ್ಯ ಎಂಬುದನ್ನು ಅರಿತು ಪೃಥ್ವಿಬಚಾವೋ ಆಂದೋಲನ ಸಮಿತಿಯನ್ನು ಸ್ಥಾಪಿಸಿ ಇದರ ಮೂಲಕ ಈ ಭೂಮಿಯ ಮತ್ತು ಸಕಲ ಜೀವ ರಾಶಿಗಳ ಉಳಿವಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಕರ್ನಾಟಕದ ಹೃದಯ ಭಾಗವಗಿರುವ ಪಶ್ಚಿಮ ಘಟ್ಟದ ನಿತ್ಯ ಹರಿದ್ವಾರ್ಣದ ಕಾದು ಅಲ್ಲಿಯ ಜೀವ ವೈವಿಧ್ಯತೆಗಳು ಮುಂದಿನ ತಲೆಮಾರಿಗೆ ಉಳಿಯುವಂತಾಗಲಿ ಎಂಬ ಕಾಳಜಿಯಿಂದ ಇಲ್ಲಿ ಸ್ಥಾಪನೆ ಆಗುತಿರುವ ಗುಂಡ್ಯ ಜಲ ವಿದ್ಯುತ್ ಯೋಜನೆಯನ್ನು ವಿರೋಧಿಸಿ ಹಲವಾರು ಚಳುವಳಿಗಳನ್ನು ಮಾಡಿದ್ದಾರೆ. ಇವರಿಗೆ ವಲಯ ಅರಣ್ಯಾಧಿಕಾರಿ  ೦.ಇ ಧರ್ಮಪ್ಪ, ತಾಲೂಕು ದಂಡಾಧಿಕಾರಿ ವರಪ್ರಸಾದ ರೆಡ್ಡಿ ಮತ್ತು ಜೀವದ ಗೆಳೆಯ ಪ್ರಕಾಶ್ ಜೈನ್ ಹಾಗೂ ಲಕ್ಷ್ಮೀನಾರಾಯಣಗುಪ್ತ, ಮನೋಹರ್, ಚಂದ್ರಬಾಬು, ದಯಾನಂದ, ಅಜ್ಜುಂ. ಜೆ.ಡಿ ಮಂಜುನಾಥ್, ಪ್ರಕಾಶ್, ಕಿರಣ್, ಪತ್ರಕರ್ತರಾದಂತಹ ಜಯರಾರಂ, ಎ. ಎಲ್ ನಾಗೇಶ್, ಮಾದಿಹಳ್ಳಿ ವೆಂಕಟೇಶ್, ಸಿದ್ದರಾಜು, ಪುಟ್ಟಣ್ಣ, ನಟೇಶ್, ಮೊದಲಾದವರು ಇವರ ಜೂತೆಗೆ ಕೈ

ಜೋಡಿಸಿದ್ದು, ಶಾಲಿನಿ ವಿದ್ಯಾ ಸಂಸ್ಥೆಯ ಮುಖ್ಯಶಿಕ್ಷಕಿರಾದ ಶ್ರೀಮತಿ ಮಮತಾರವರು ಹಾಗೂ ಎಲ್ಲಾ ಸಹ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇವರ ವೃಕ್ಷಾರೋಪಣೆಯಲ್ಲಿ, ಮಾರ್ಗದರ್ಶನ, ಸಲಹೆ, ಸಹಕಾರ ಇವರಿಗೆ ಶ್ರೀರಕ್ಷೆ,

ಆದಿಚುಂಚನಗಿರಿ ಶ್ರೀಗಳು, ಮಂತ್ರಾಲಯ ಶ್ರೀಗುರುರಾಯರ ಶ್ರೀಮಠದ ಪೂಜ್ಯ ಶ್ರೀ ಮಠದ ಪೂಜ್ಯ ಶ್ರೀ ಶ್ರವಣಬೆಳಗೊಳ ಚಾರು ಶ್ರೀಗಳು ಸೇರಿದಂತೆ ಅನೇಕ ಪೂಜ್ಯರ ಆಶ್ರೀರ್ವಾದದ ಫಲ ಇವರಿಗೆ ಮತ್ತಷ್ಟು ಹುರುಪು, ಹುಮಸ್ಸು ಬಂದಿದೆ. ಇವರ ಪತ್ನಿ ರಾಧ, ಪುತ್ರಿ ಪ್ರಿಯಾಂಕ, ಮೇಘನಾ, ಪುತ್ರ ವಿವೆಕ್ ಸಹಕಾರದಿಂದ ನೆಮ್ಮದಿ ಕಂಡಿದ್ದಾರೆ.

**ನಮ್ಮೂರ ಹಬ್ಬ, ಇವರ ಕನಸು ಇಂದು ನನಸಾಗಿ ಸಹಸ್ರಾರು ಮನ  ಗೆದ್ದಿದೆ. ಚಂದ್ರಶೇಖರ ಸ್ವಾಮಿಯವರ ಗ್ರಾಮದೇವರ ಜಾತ್ರಾ ಉತ್ಸವದಲ್ಲೀ ದೇಶಿಯ ಕಲೆಗಳನ್ನು ಇವರು ಕಟ್ಟಿ ಬೆಳೆಸಿದಸ್ನೇಹ ಬಳಗದ ವತಿಯಿಂದ 1 ವಾರಗಳ ಕಾಲ ರಸದೂಟ ನೀಡುವ ಕಾಯಕಕ್ಕೆ ಇವರು ಚಾಲನೆ ನೀಡಿದ್ದಾರೆ. ಈ ಮೂಲಕ ನೂರಾರು ಕಲಾವಿದರಿಗೆ ವೇದಿಕೆಯನ್ನು ಕಲ್ಪಿಸಿ ಅವರು ಈ ಮಾಲಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಅವರ ಪ್ರತಿಭೆಯನ್ನು ತೋರಿಸಲು ಅವಕಾಶ ಕಲ್ಪಿಸಿದ್ದಾರೆ.**

**ಗಣಪತಿ ಸೇವ ಸಮಿತಿಯಿಂದ ಗೆಳೆಯರ ನೆರವಿನೊಂದಿಗೆ ಗಣಪತಿ ಕಲ್ಯಾಣ ಮಂಟಪವನ್ನು ನಿರ್ಮಿಸಿ ಬಡವರ ಮದುವೆಗೆ ಸಹಕಾರಿಯಾಗಿದ್ದಾರೆ.**

**ಹುಟ್ಟಿನಿಂದ- ಸಾವಿನವರೆಗೆ ಎಲ್ಲದರಲ್ಲೂ** ಭಾಗವಹಿಸುವ ಸಹಾಯ ಹಸ್ತ ಚಾಚುವ ಅಶೋಕ ಅದೆಷ್ಟು ಅನಾಥಶವಗಳ ಸಂಸ್ಕಾರಕ್ಕೆ ಮುಂದಾಗಿದ್ದಾರೆ. ಸತ್ಯ ಹರಿಶ್ಚಂದ್ರ ಶಾಂತಿಧಾಮವನ್ನು ನಿರ್ಮಿಸಿ ಶವ ಸಂಸ್ಕಾರಕ್ಕೆ ನೆಮ್ಮದಿ ಮಾಡಿದ್ದಾರೆ. ಇವರ ಜೀವನದ ಪುಟಗಳು ಮನುಷ್ಯನಾದ ಪ್ರತಿಯೊಬ್ಬರ ಮೇಲೂ ಬೆಳಕು ಚೆಲ್ಲುತ್ತಿದೆ.

ಮಹಾರಾಷ್ಟ್ರ ಮತ್ತು ಗುಜರಾತ್, ಭೂಕಂಪ ಸಂತ್ರಸ್ಥರಿಗೆ ಹಾಗು ಉತ್ತರ ಕರ್ನಾಟದ ನೆರೆ ಸಂತ್ರಸ್ಥರಿಗೆ ಮತ್ತು  ಕಾರ್ಗಿಲ್ ಯದ್ಧದ ಸಮಯದಲ್ಲಿ ನಾಗರಿಕರಿಂದ 5 ಲಕ್ಷಕ್ಕೂ ಹೆಚ್ಚು ಹಣವನ್ನು ಸಂಗ್ರಹಿಸಿ ಕಳುಹಿಸಿರುತ್ತಾರೆ. ಸುನಾಮಿ ಸಂತ್ರಸ್ಥರಿಗೆ ಸಹಾಯ ಹಸ್ತ ಚಾಚಿ, ಸ್ನೇಹಬಳಗ, ನಾಗರೀಕ ವೇದಿಕೆ ವತಿಯಿಂದ ತಮಿಳುನಾಡು ವೆಲ್ಲಾಂ ಗಣಿ, ನಿಕ್ಕಲ್, ನಾಗೂರು, ಅಕ್ಕರ್ ಪೇಟೆ, ನಾಗಾಪಟ್ಟಣಂ ಪ್ರದೇಶದ ಸಂತ್ರಸ್ದರಿಗೆ ಬಟ್ಟೆಧಾನ್ಯ, ಪಾತ್ರೆಗಳನ್ನು ನೀಡಿ ಮಾನವೀಯತೆಯಿಂದ ಮೆರೆದಿದ್ದಾರೆ.

ಜಿಲ್ಲೆಯನ್ನು ಹಸಿರುಕರಣ ಮಾಡುವ ಮಹದಾಸೆಯನ್ನು ಹೊಂದಿ ಮನೆ ಹಾಗು ಶಾಲಾ-ಕಾಲೇಜುಗಳಲ್ಲಿ  ಕೈ ತೋಟ ಬೆಳೆಸುವವರಿಗೆ ಪ್ರತಿವರ್ಷ ಬಹುಮಾನ ನೀಡುವ ಅಶೋಕ್ ತಾಲ್ಲೂಕಿನ್ನು ಕಳೆದ 25 ವರ್ಷಗಳಲ್ಲಿ ಹಸಿರನ್ನಾಗಿಸಿ ರಾಜ್ಯದಲ್ಲಿ ಗುರ್ತಿಸುವ ಕಾರ್‍ಯವನ್ನು ಮಾಡಿದ್ದಾರೆ. ಅವರ ಚಿಂತನೆ, ಆಲೋಚನೆ, ವಿವೇಚನೆ ತಾಲ್ಲೋಕಿಗೆ ಮಾತ್ರ ಸೀಮಿತವಾಗಿರದೆ ರಾಜ್ಯ, ದೇಶವನ್ನೇ

ಹಸಿರು, ಮಾಡಿ ಹಸಿರು ಕ್ರಾಂತಿ ಮಾಡುವ ಚಿಂತನೆ ಇವರದ್ದಾಗಿದೆ. ಅವರ ಮಾರ್ಗದರ್ಶನ ಪಡೆದು ನೂರಾರು ಪರಿಸರ ಪ್ರೇಮಿಗಳು ಉದಯವಾಗಿ ಈ ನಾಡು ಹಸಿರು ನೆಲೆವೀಡಾಗಲಿ ಎಂಬುದು ಬಯಕೆಯಾಗಿದೆ.




ಕರ್ನಾಟಕ ಸರ್ಕಾರ

